# ಟೆಸ್ಟ್ ಕ್ರಿಕೆಟ್‌ಗೆ

## ಆಡಿಗೆರೆ ಎಳೆದ ಸರಣಿ

25 ದಿನಗಳ ಟೆಸ್ಟ್ ಸರಣಿ. ಅಷ್ಟೂ ದಿನ ಪಂದ್ಯಗಳು ನಡೆದವು. ಇತ್ತೀಚೆಗೆ ಟೆಸ್ಟ್ ಕ್ರಿಕೆಟ್ ಮೂರು ನಾಲ್ಕು ದಿನಗಳಲ್ಲೇ ಮುಗಿಯುತ್ತಿದ್ದುದನ್ನು ನೋಡಿ ನಿಯಮವನ್ನೇ ಬದಲಿಸಿ, ನಾಲ್ಕು ದಿನಗಳಿಗೆ ಟೆಸ್ಟ್ ಪಂದ್ಯದ ಅವಧಿ ಇಳಿಸುವ ಆಲೋಚನೆಗೆ ಅಂತರರಾಷ್ಟ್ರೀಯ ಕ್ರಿಕೆಟ್ ಸಂಸ್ಥೆ ಮುಂದಾಗಿತ್ತು. ಭಾರತ ಹಾಗೂ ಇಂಗ್ಲೆಂಡ್ ಆಡಿದ ರೀತಿ ಆ ಆಲೋಚನೆಯನ್ನು ಮರೆಯುವಂತೆ ಪ್ರೇರೇಪಣೆ ನೀಡಿದೆ.

■ ವಿಶಾಖ ಎನ್.




ಮೊಹಮ್ಮದ್ ಸಿರಾಜ್

ಮೊಹಮ್ಮದ್ ಸಿರಾಜ್ ಹಾಕಿದ 143 ಕಿ.ಮೀ./ಗಂಟೆ ವೇಗದ ಯಾರ್ಕರ್ ಆಫ್ ಸ್ಟಂಪ್ ಬುಡಕ್ಕೆ ಅಪ್ಪಳಿಸಿದ್ದೇ ವಿಕೆಟ್ ಮೇಲಕ್ಕೆ ಹಾರಿತು. ಗಸ್ ಅಟ್ಕಿನ್ಸನ್ ಅದುವರೆಗೆ ತೋರಿಸಿದ್ದ ಪ್ರತಿರೋಧಕ್ಕೂ ತೆರೆಬಿತ್ತು. ಭಾರತ ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲೇ ನೆನಪಿಟ್ಟುಕೊಳ್ಳುವ ಪಂದ್ಯವನ್ನು ತನ್ನತ್ತ ಎಳೆದುಕೊಂಡಿತು. ಇಂಗ್ಲೆಂಡ್ ಕಡೆಗೆ ವಾಲಿದ್ದ ವಿಜಯಲಕ್ಷ್ಮಿಯನ್ನು ಭಾರತದತ್ತ ಹಿಡಿದೆಳೆದುಕೊಂಡವರು ಸಿರಾಜ್. ಹೀಗಾಗಿಯೇ ಅವರು ಸದ್ಯದ ಹೀರೊ. ತಾವು ಮಾಡಿದ ಕೊನೆಯ ಇನಿಂಗ್ಸ್‌ನ ಮೂವತ್ತೊಂದನೇ ಓವರ್ ಅದಾಗಿತ್ತು. ಅದು ಇಡೀ ಸರಣಿಯಲ್ಲಿ ಅವರು ಹಾಕಿದ ಐದನೇ ಅತಿ ವೇಗದ ಎಸೆತ. ಅವರ ಕಸುವು ಎಂಥದು, ನೋಡಿ. ಆ್ಯಂಡರ್ಸನ್ ತೆಂಡೂಲ್ಕರ್ ಟ್ರೋಫಿಯನ್ನು ಭಾರತ ಹಾಗೂ ಇಂಗ್ಲೆಂಡ್ ಎರಡೂ ಹಂಚಿಕೊಳ್ಳುವ ಸ್ಥಿತಿಯಲ್ಲಿ 2–2ರಲ್ಲಿ ಟೆಸ್ಟ್ ಸರಣಿ ಡ್ರಾ ಆಯಿತು.

ಭಾರತವು ಈ ಸರಣಿಗೆ ಯುವಪಡೆಯನ್ನು ಆರಿಸಿದಾಗಲೇ ಅನುಮಾನದ ಕಾರ್ಮೋಡ ದಟ್ಟೈಸಿತ್ತು. ಇಂಗ್ಲೆಂಡ್ ಕ್ರೀಡಾಂಗಣಗಳಲ್ಲೂ ಆಗಾಗ ಮೋಡಗಳ ತೊನೆದಾಟ. ಈ ಸರಣಿಯನ್ನು ಆಸ್ಟ್ರೇಲಿಯಾ ಎದುರಿನ ashes ಸರಣಿಗೆ ಪೂರ್ವಭಾವಿ ಅಭ್ಯಾಸ ಎಂದು ಇಂಗ್ಲೆಂಡ್‌ನ ಕೆಲವು ಕ್ರಿಕೆಟಿಗರು ವಿಶ್ಲೇಷಿಸಿದ್ದು, ಮನೋಬಲ ಪರೀಕ್ಷೆಗೆ ಒಡ್ಡುವ ಸನ್ನಿವೇಶವೊಂದನ್ನು ತಂತಾನೇ ಸೃಷ್ಟಿಸಿತ್ತು. ಸರಣಿಯು ಏನಾಗಬಹುದು ಎಂದು ಅಂದಾಜು ಮಾಡಿದವರಲ್ಲಿ ಭಾರತದ ದಿನೇಶ್ ಕಾರ್ತಿಕ್ ಒಬ್ಬರೇ 2–2 ಎಂದು ಊಹಿಸಿದ್ದವರು. ಅದು ನಿಜವಾದ ನಂತರ ಅವರು ಆಡಿದ ಮಾತು ಅರ್ಥಪೂರ್ಣ: ‘ಜಸ್ಪ್ರೀತ್ ಬೂಮ್ರಾ ವಿಶ್ವದ ಶ್ರೇಷ್ಠ ಬೌಲರ್. ಶುಭಮನ್ ಗಿಲ್ ಅವರಿಗೆ ನಾಯಕರಾಗಿ ಇದು ಮೊದಲ ಮುಖ್ಯ ಪರೀಕ್ಷೆ. ಕೆ.ಎಲ್. ರಾಹುಲ್ ಆರಂಭಿಕ ಆಟಗಾರರಾಗಿ ತಮ್ಮ ಕಸುವನ್ನೆಲ್ಲ ಬಡಿಯುವಂತೆ ಆಡಬೇಕಾದ ಸವಾಲನ್ನು ಒಡ್ಡುವ ನೆಲ ಇಂಗ್ಲೆಂಡ್. ರವೀಂದ್ರ ಜಡೇಜಾ ವಿಶ್ವ ದರ್ಜೆಯ ಆಲ್ ರೌಂಡರ್. ಯಶಸ್ವಿ ಜೈಸ್ವಾಲ್ ಅವರ ಹದವರಿತ ಆಕ್ರಮಣದ ಆಟದ ಕಾಣ್ಕೆ ಭಾರತಕ್ಕೆ ಇದ್ದೇ ಇರುತ್ತದೆ ಎಂಬ ನಂಬಿಕೆ ಇತ್ತು. ರಿಷಭ್ ಪಂತ್ ದಾಳಿಕೋರ ಆಟ ಎಂತಹ ಎದುರಾಳಿಗಳನ್ನು ಕೂಡ ಕಂಗೆಡಿಸಬಲ್ಲದು. ಇಂಗ್ಲೆಂಡ್ ಬಳಿ ವಿಶ್ವ ದರ್ಜೆಯ, ನುರಿತ ಟೆಸ್ಟ್ ತಜ್ಞ ಬ್ಯಾಟ್ಸ್‌ಮನ್ ರೂಪದಲ್ಲಿ ಜೋ ರೂಟ್ ಇದ್ದಾರೆ. ವಿಕೆಟ್ ಕೀಪರ್ ಜೆಮಿ ಸ್ಮಿತ್ ಆಟದಲ್ಲಿ ಪಾದರಸದಂತಹ ಗುಣವಿದೆ. ಕ್ರಿಸ್ ವೋಕ್ಸ್, ಜೋಫ್ರಾ ಆರ್ಚರ್ ವೇಗದ ಅಸ್ತ್ರಗಳು, ಖುದ್ದು ಬೆನ್ ಸ್ಟೋಕ್ಸ್ ಅವರ ಹೋರಾಟದ ನಾಯಕತ್ವದ ಗುಣ. ಹೀಗಾಗಿ ಎರಡೂ ತಂಡಗಳು ನನ್ನ ಪ್ರಕಾರ ಸಮಬಲ ಸಾಧಿಸಬಲ್ಲವು ಎಂಬ ಅಂದಾಜು ಇತ್ತು. ಮೊಹಮ್ಮದ್ ಸಿರಾಜ್, ವಾಷಿಂಗ್ಟನ್ ಸುಂದರ್ ಇಬ್ಬರೂ ನನ್ನ ಅಂದಾಜನ್ನು ನಿಕ್ಕಿ ಮಾಡಿಬಿಟ್ಟರು.’

ದಿನೇಶ್ ಊಹೆ ಸರಿಯಾಗಿಯೇ ಇತ್ತು. ಜೈಸ್ವಾಲ್ ಶತಕದೊಂದಿಗೆ ಸರಣಿ ಶುರು ಮಾಡಿದರು. ನಡುವೆ ಲಯ ತಪ್ಪಿದರು. ಕೊನೆಯ ಇನಿಂಗ್ಸ್‌ನಲ್ಲಿ ಮತ್ತೆ ಶತಕ ದಾಖಲಿಸಿ ತಾವು ಪಾಠ ಕಲಿಯುವುದೂ ಲಗುಬಗೆಯಲ್ಲಿ ಎನ್ನುವುದನ್ನು ಸಾರಿದರು. ಕೆ.ಎಲ್. ರಾಹುಲ್ ಆರಂಭಿಕ ಆಟಗಾರನಾಗಿ ಇಂಗ್ಲೆಂಡ್‌ನ ಸವಾಲೊಡ್ಡುವ ಅಂಗಳದಲ್ಲೂ ಎಷ್ಟು ಗಟ್ಟಿಗ ಎನ್ನುವುದನ್ನು ಪದೇ ಪದೇ ಸಾರಿದ ಸರಣಿ ಇದು. ಸಾಯಿ ಸುದರ್ಶನ್

